# ಸೋನಂ ಬದುಕಿನ ಕಥೆ!

‘ಬೇವಕೂಫಿಯಾನ್’ ಚಿತ್ರದ ಕಥೆಗೂ ನಟಿ ಸೋನಂ ಕಪೂರ್ ಜೀವನಕ್ಕೂ ಹತ್ತಿರದ ಸಾಮ್ಯವಿದೆಯಂತೆ. ಒಂದು ರೀತಿಯಲ್ಲಿ ಅದು ಸೋನಂ ಮತ್ತು ಅವರ ಮಾಜಿ ಪ್ರೇಮಿಗಳ ಬದುಕಿನ ಚಿತ್ರಣವನ್ನೇ ಒಳಗೊಂಡಿದೆ ಎನ್ನಲಾಗುತ್ತಿದೆ.

ಸೋನಂ ‘ಬೇವಕೂಫಿಯಾನ್’ನಲ್ಲಿ ತನ್ನ ಬಾಯ್‌ಫ್ರೆಂಡ್‌ಗಿಂತಲೂ ಅಧಿಕ ಪಗಾರ ಸಂಪಾದಿಸುವ ಪ್ರೇಮಿಯಾಗಿ ಕಾಣಿಸಿಕೊಂಡಿದ್ದಾರೆ. ಸೋನಂ ಜೊತೆಗಾರನಾಗಿ ನಟಿಸಿರುವುದು ಆಯುಷ್ಮಾನ್ ಖುರಾನಾ. ಸೋನಂರ ನೈಜ ಬದುಕಿಗೂ ಈ ಚಿತ್ರದ ಕಥೆಗೂ ಹೋಲಿಕೆ ಇರುವುದು ಇಲ್ಲಿಯೇ. ಇದುವರೆಗೂ ಸೋನಂ ಡೇಟ್ ಮಾಡಿರುವ ಎಲ್ಲಾ ಹುಡುಗರ ಪರಿಸ್ಥಿತಿಯೂ ಹಾಗೆಯೇ ಇತ್ತಂತೆ. ಸೋನಂ ಬದುಕಿನಲ್ಲಿ ಬಂದು ಹೋದ ಹುಡುಗರೆಲ್ಲರೂ ಆಕೆಗಿಂತ ಕಡಿಮೆ ವೇತನ ಪಡೆಯುತ್ತಿದ್ದವರು ಅಥವಾ ನಿರ್ದಿಷ್ಟ ಸಂಬಳ ಇಲ್ಲದವರೇ ಆಗಿದ್ದರಂತೆ.

ಸಂಬಂಧಗಳಲ್ಲಿ ಹಣ ಮುಖ್ಯವಲ್ಲ ಎನ್ನುವುದು ಸೋನಂ ನೀತಿ. ಹೀಗಾಗಿ ಆಕೆ ಎಂದಿಗೂ ಕಡಿಮೆ ಹಣ ಉಳ್ಳವರು ಎಂದು ತನ್ನ ಬಾಯ್‌ಫ್ರೆಂಡ್‌ಗಳನ್ನು ನಿರ್ಲಕ್ಷಿಸಿದವರೇ ಅಲ್ಲ. ಸೋನಂ ಈ ಹಿಂದೆ ‘ಸಾವರಿಯಾ’ದ ತನ್ನ ಸಹನಟ ರಣಬೀರ್ ಕಪೂರ್, ‘ಐ ಹೇಟ್ ಲವ್ ಸ್ಟೋರಿ’ಯ ನಿರ್ದೇಶಕ ಪುನೀತ್ ಮಲ್ಹೋತ್ರಾ ಅವರೊಂದಿಗೂ ಪ್ರೇಮ ಸಲ್ಲಾಪ ನಡೆಸಿದ್ದರು. ಬಹುಶಃ ಆಕೆಗಿಂತ ಅಧಿಕ ವೇತನ ಪಡೆದುಕೊಂಡವರು ಇವರಿಬ್ಬರೇ ಇರಬೇಕು ಎನ್ನುತ್ತಿದೆ ಬಿ–ಟೌನ್.

ಅಂದ ಹಾಗೆ, ಈ ಚಿತ್ರದಲ್ಲಿ ಸೋನಂ ಬಿಕಿನಿಯಲ್ಲಿ ದೇಹಸೌಂದರ್ಯ ತೆರೆದಿಟ್ಟಿದ್ದಾರೆ. ಬಾಲಿವುಡ್ ಪ್ರವೇಶಿಸುವ ಮೊದಲು ಬರೋಬ್ಬರಿ 90 ಕೆಜಿ ತೂಗುತ್ತಿದ್ದ ಸೋನಂ ತೂಕ ಇಳಿಸಿಕೊಂಡು ಬಳಕುವ ದೇಹ ಪಡೆದಿದ್ದು ಗುಟ್ಟೇನೂ ಅಲ್ಲ. ಈಗ ಅದನ್ನು ಬಿಚ್ಚಿಡಲು ಸೋನಂ ಮುಜುಗರ ಪಡುತ್ತಿಲ್ಲ. ನಿರ್ಮಾಪಕರಾಗಲೀ, ನಿರ್ದೇಶಕರಾಗಲೀ ಸೋನಂಗೆ ಬಿಕಿನಿ ತೊಡಬೇಕು ಎಂದು ಹೇಳಿರಲಿಲ್ಲ. ಆದರೆ ಆ ಸನ್ನಿವೇಶಕ್ಕೆ ಬಿಕಿನಿಯೇ ಚೆನ್ನ ಎಂದು ಸ್ವತಃ ಸೋನಂ ಬಿಕಿನಿಯಲ್ಲಿ ಬಿಂದಾಸ್ ಆಗಿ ಕ್ಯಾಮೆರಾ ಮುಂದೆ ನಿಂತರಂತೆ.

■ ಅಮಿ



